# ಬಹು ದರ್ಜೆ, ಬಹುಸ್ತರಗಳ ಬೋಧನೆ ಮುಂದಿರುವ ಹಾದಿ

ನಿಕೇತ್ ಸಾಗರ್

ಕೋವಿಡ್ -19 ಹುಟ್ಟುಹಾಕಿದ ಪರಿಸ್ಥಿತಿಯು ದೇಶ ಮತ್ತು ಜಗತ್ತಿನಾದ್ಯಂತ ವಾಡಿಕೆಯ ನಮ್ಮ ದೈನಿಕ ಚಟುವಟಿಕೆಗಳು, ಸಂಸ್ಥೆಗಳ ಕಾರ್ಯನಿರ್ವಹಣೆ ಮತ್ತು ಸೇವೆ - ವಿತರಣೆಯ ವ್ಯವಸ್ಥೆಯ ಪ್ರತಿಯೊಂದು ಅಂಶದ ಮೇಲೂ ಪರಿಣಾಮ ಬೀರಿದೆ. ಸದ್ಯಕ್ಕೆ ಮಕ್ಕಳಿಗೆ ಶಾಲೆಗಳು ಮುಚ್ಚಿದ್ದು, ಕೋವಿಡ್ ಎರಡನೇ ಅಲೆಯ ಅನಿಶ್ಚಿತತೆ ಇದ್ದರೂ, ಕೆಲವು ರಾಜ್ಯಗಳು ಶಾಲೆ ತೆರೆಯುವ ದಿಕ್ಕಿನಲ್ಲಿ ಮುಂದುವರಿಯುತ್ತಿವೆ. ಈ ಹದಿನೆಂಟು ತಿಂಗಳುಗಳಲ್ಲಿ ರಾಜ್ಯ ಸರ್ಕಾರಗಳು ಬೋಧನೆ-ಕಲಿಕೆಯ ಪ್ರಕ್ರಿಯೆಯನ್ನು ಸುಗಮಗೊಳಿಸಲು ಆನ್ಲೈನ್ ಹಾಗು ಮುಖ್ಯ ವಾಹಿನಿಯ ಮಾಧ್ಯಮ ವೇದಿಕೆಗಳಿಂದ ಅತ್ಯಧಿಕ ಅನುಕೂಲವನ್ನು ಪಡೆಯಲು ಅಗತ್ಯಗಳಿಗೆ ತಕ್ಕಂತೆ ವಿಧಾನಗಳನ್ನು ಪ್ರಯೋಗಿಸಿವೆ. ಗ್ರಾಮೀಣ ಭಾರತದ ಸರ್ಕಾರಿ ಶಾಲೆಗಳಲ್ಲಿ ಮಕ್ಕಳನ್ನು ಕಲಿಕೆಯಲ್ಲಿ ತೊಡಗಿಸುವ ಈ ವಿಧಾನಗಳನ್ನು ಕಾರ್ಯಗತಗೊಳಿಸಲು ಶಿಕ್ಷಕರು ಕೈಮೀರಿ ಪ್ರಯತ್ನಿಸಿದ್ದರೂ, ಇಲ್ಲಿನ ಪ್ರಾದೇಶಿಕ ಹಾಗೂ ಭೌಗೋಳಿಕ ಅಸಮಾನತೆಗಳು, ಸಂಪನ್ಮೂಲಗಳು ಅಲಭ್ಯತೆ ಮತ್ತು ತಲುಪದೇ ಇರುವ,ಹಾಗು ಅಗಾಧ ಡಿಜಿಟಲ್ ಕಂದಕದ ಕಾರಣಗಳಿಂದಾಗಿ ಅನೇಕ ಸಮಸ್ಯೆಗಳು ತಲೆದೋರಿದವು. ಭೌತಿಕ ಹಾಗು ಆನ್ಲೈನ್ ಕಲಿಕೆಯ ಇತಿ-ಮಿತಿಗಳ ಸಮಸ್ಯೆಯನ್ನು ಜಗತ್ತಿನಾದ್ಯಂತ ಅನೇಕ ಅಧ್ಯಯನಗಳು ದಾಖಲಿಸಿವೆ.

ಶಾಲೆಗಳು ಮತ್ತೆ ತೆರೆದಾಗ ನಮ್ಮ ಯಾವ ಕೆಲಸದ ವಿಚಾರವಾಗಿ ಆಳವಾಗಿ ಚಿಂತಿಸಬೇಕಿದೆಯೋ ಅದರ ಕೆಲವು ಮುಖ್ಯ ವಿಭಾಗಗಳನ್ನು ನಾವು ಗುರುತಿಸಿದ್ದೇವೆ. ನಮ್ಮ ನಿಗದಿತ ಕಲಾಪಗಳು ಹಾಗು ಕಾರ್ಯಾಗಾರಗಳ ಮೂಲಕ ಈ ವಿಭಾಗಗಳ ಚರ್ಚೆಯನ್ನು ಭಾಗಿದಾರರಾದ ಎಲ್ಲರೊಡನೆ — ಶಿಕ್ಷಕರು, ಮುಖ್ಯ ಶಿಕ್ಷಕರು ಮತ್ತು ಪೋಷಕರೊಂದಿಗೆ ಮಾಡಲಾಗಿದೆ. ನಮ್ಮ ಶಿಕ್ಷಕರು ಮುಂದೆ ಬರಲಿರುವ ಸವಾಲುಗಳ ಬಗ್ಗೆಗಿನ ಅವರ ಪ್ರಾಥಮಿಕ ತಿಳಿವಳಿಕೆಯನ್ನು, ಅವುಗಳನ್ನು ನಿವಾರಿಸಿಕೊಳ್ಳುವ ಉಪಾಯ ಹಾಗು ಕಾರ್ಯನೀತಿಗಳ ಜೊತೆಗೆ, ಹಂಚಿಕೊಂಡಿದ್ದಾರೆ. ಅವರ ಪ್ರಕಾರ, ಮಕ್ಕಳ ಶಾಲಾಜೀವನದಲ್ಲಿನ ಈ ಕಂದಕ ಮಕ್ಕಳ ಒಟ್ಟಾರೆ ಕಲಿಕೆಯ ಮೇಲೆ ದೀರ್ಘಕಾಲಿಕ ಪರಿಣಾಮ ಬೀರಲಿದೆ. ಶಾಲೆಗಳ ಮುಚ್ಚುವಿಕೆಯಿಂದ ತರಗತಿಗಳ ಸಂವಾದಕ್ಕೆ ಮಿತಿಹೇರಿದೆಯಲ್ಲದೆ, ಅದು ನಮ್ಮ ಶಿಕ್ಷಕರು ಪರಿಣಾಮಕಾರಿ ಕಾರ್ಯರೀತಿಯಿಂದ ದೂರಸರಿಯುವಂತೆ ಮಾಡಿದೆ. ಕೆಳಗೆ ಈ ಸಮಸ್ಯೆಗಳನ್ನು ಚರ್ಚಿಸಲಾಗುತ್ತದೆ. ಶಾಲೆಗಳು ಮರಳಿ ತೆರೆಯುವುದನ್ನು ಕಲ್ಪಿಸಿಕೊಂಡು ಅದಕ್ಕಾಗಿ ಸಜ್ಜಾಗುವ ಮೂಲಕ ಉತ್ತಮತರ ಬೋಧನಾ-ಕಲಿಕೆ ಪ್ರಕ್ರಿಯೆಗಳಿಗಾಗಿ ನಾವೆಲ್ಲರೂ ಹೇಗೆ ತಯಾರಿ ನಡೆಸಿದ್ದೇವೆ ಎಂಬುದಕ್ಕೆ ನಾನು ಈ ಲೇಖನದಲ್ಲಿ ಒತ್ತುನೀಡುತ್ತಿದ್ದೇನೆ. ನಾವು ಏನನ್ನು ಮಾಡಬಹುದು, ಪ್ರಸ್ತುತ ಸಂದರ್ಭದಲ್ಲಿ ನಾವು ಹೇಗೆ ಮುಂದುವರಿಯಬಹುದು ಹಾಗು ಕಲಿಕೆಯಲ್ಲಿನ ಈ ಬಿರುಕನ್ನು ಮುಚ್ಚುವ ಮತ್ತು ಶಾಲೆಗಳ ರೂಢಿಗತ ಕಾರ್ಯಾಚರಣೆಗೆ ಹಿಂತಿರುಗುವ ನಮ್ಮ ಗುರಿಯನ್ನು ಸಾಧಿಸುವುದಕ್ಕೆ ನಾವು ಯಾವ ಯೋಜನೆ ಹಾಕಿಕೊಳ್ಳಬಹುದು ಎಂಬುದನ್ನು ಇಲ್ಲಿ ಪರಿಶೀಲಿಸುತ್ತೇನೆ.

## ಮಕ್ಕಳು ಹಾಗು ಕಳೆದುಹೋದ ಕಾಲ

ಮಗುವಿಗೆ ಈ “ಹೊಸ ವಾಡಿಕೆ-ಸ್ಥಿತಿ” ಅದರ ಜೀವನದ ಎಲ್ಲಾ ಅಂಶಗಳನ್ನೂ ಆಕ್ರಮಿಸಿದೆ. ಶಾಲೆಯಿಲ್ಲ, ಪರೀಕ್ಷೆಯಿಲ್ಲ ಮತ್ತು ಶಾಲೆಗಳು ಮತ್ತೆ ಪುನರಾರಂಭಗೊಳ್ಳಲು ಇನ್ನೂ ದೀರ್ಘಕಾಲ ಕಾಯಬೇಕಿದೆ. ಈ ಒಂದೂವರೆ ವರ್ಷಗಳಲ್ಲಿ ಮಾನಸಿಕವಾಗಿ,

ಸಾಮಾಜಿಕವಾಗಿ ನಾನಾ ಶ್ರೇಣಿಗಳಲ್ಲಿ ಮಕ್ಕಳು ಸಂಕಟ ಅನುಭವಿಸಿದ್ದಾರೆ. ಇದು ಮುಖ್ಯವಾಗಿ ಮಕ್ಕಳು ಸಾಮಾಜಿಕವಾಗಿ ಬೆರೆಯಲು ಅವಕಾಶಗಳು ಸೀಮಿತವಾಗಿರುವ ಕಾರಣದಿಂದಾಗಿದೆ. ಅವರ ದೈನಂದಿನ ಜೀವನಶೈಲಿಯಲ್ಲಿ, ದಿನಚರಿಯಲ್ಲಿ ಮತ್ತು ಅವರ ಒಟ್ಟಾರೆ ಸಾಮಾಜಿಕ ವರ್ತನೆಗಳಲ್ಲಿ ಭಾರೀ ಬದಲಾವಣೆಗಳಾಗಿವೆ. ನಮ್ಮ ಜಿಲ್ಲೆಯಲ್ಲಿ (ಬಾನ್ಸವಾಡಾ) ಜನಸಂಖ್ಯೆಯ ಬಹುತೇಕ ಭಾಗ ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುತ್ತಿದ್ದು, ರೂಢಿಯಾದ ಗ್ರಾಮೀಣ ಜೀವನದಲ್ಲಿ ಆರೋಗ್ಯ ಮತ್ತು ಶುಚಿತ್ವಕ್ಕೆ ಸಂಬಂಧಿಸಿದ ಅಂಶಗಳ ವಿಚಾರವಾಗಿ ಇದ್ದಕ್ಕಿದ್ದಂತೆ ನೀಡಲಾಗುತ್ತಿರುವ ಪ್ರಾಧಾನ್ಯ ಗ್ರಾಮಸ್ಥರಲ್ಲಿ ಭಯ ಮತ್ತು ಆತಂಕಗಳನ್ನು ಹುಟ್ಟುಹಾಕಿದೆ. ನಮ್ಮ ಶಿಕ್ಷಕರು ಸ್ಥಳೀಯ ಮಕ್ಕಳೊಂದಿಗೆ ಪ್ರತಿದಿನದ ಒಡನಾಟದಲ್ಲಿ ಈ ಎಲ್ಲಾ ಅಂಶಗಳನ್ನು ಗಮನಿಸಿದ್ದಾರೆ. ನಮ್ಮ ಶಿಕ್ಷಕರಲ್ಲಿ ಒಬ್ಬರಾದ ಧರ್ಮಿಷ್ಠ ಪಾಂಡ್ಯ, “ಶಾಲೆಗಳು ತೆರೆಯುತ್ತಿದ್ದಂತೆಯೇ ನಾವು ಶಿಕ್ಷಕರು, ಮಕ್ಕಳ ಅಗತ್ಯಗಳನ್ನು ಅರ್ಥಮಾಡಿಕೊಳ್ಳುವ ಕಡೆಗೆ ಮೊದಲ ಹೆಜ್ಜೆ ಇಡಬೇಕು. ಈ ಅಗತ್ಯಗಳು ಶೈಕ್ಷಣಿಕ ವಿಷಯಗಳಿಗೆ ಮಾತ್ರ ಸೀಮಿತವಾಗಿರದೆ, ಇದರ ವ್ಯಾಪ್ತಿ ಬದುಕಿನ ಅನುಭವಗಳು, ಭಾವನೆಗಳು ಹಾಗು ದುರ್ಬಲತೆಯ ಚಿಂತೆಗಳ ವ್ಯಾಪಕ ಹರಹನ್ನು ಹೊಂದಿರಬೇಕಿದೆ.” ಎಂದು ಹೇಳುತ್ತಾರೆ. ಈಗಾಗಲೇ ಮಕ್ಕಳೊಡನೆ ತಮ್ಮ ದೈನಂದಿನ ಅನುಭವಗಳ ವಿಚಾರವಾಗಿ ಚರ್ಚಿಸುತ್ತಾ ಅವರು, ತಮ್ಮ ಶಾಲೆಯ ಪ್ರತಿ ಮಗುವಿಗೂ ಏನು ಇಷ್ಟ, ಏನು ಇಷ್ಟವಿಲ್ಲ; ಅವರು ತಮ್ಮನ್ನು ತೊಡಗಿಸಿಕೊಳ್ಳುವ ರೀತಿಗಳಾವುವು ಹಾಗು ಉದ್ದೇಶಪೂರ್ವಕವಾಗಿ ಯಾವುದರಲ್ಲಾದರೂ ತೊಡಗಿಸಿಕೊಂಡರೆ ಎಷ್ಟು ಸಮಯ ಗಮನವನ್ನು ಅದಕ್ಕಾಗಿ ಅವರು ನೀಡಲು ಸಾಧ್ಯವಾಗುತ್ತದೆ ಎಂಬುದಕ್ಕೆ ಅವರು ಮಹತ್ವ ನೀಡುತ್ತಾರೆ. ಶಿಕ್ಷಕರು ತನ್ನನ್ನು ಪ್ರೀತಿಯಿಂದ ಬರಮಾಡಿಕೊಂಡು, ತನಗೆ ಗಮನಕೊಡುತ್ತಾರೆ ಎಂದು ಒಮ್ಮೆ ಮಗುವಿಗೆ ಮನವರಿಕೆಯಾದರೆ, ಅದರ ಸಂಕೋಚ, ದಾಕ್ಷಿಣ್ಯಗಳು ಕ್ರಮೇಣ ಸಡಿಲಗೊಂಡು, ಅದು ಶಾಲಾ ಚಟುವಟಿಕೆಗಳಲ್ಲಿ ಹಾಗು ಬೋಧನೆ-ಕಲಿಕೆಯ ಪ್ರಕ್ರಿಯೆಗಳಲ್ಲಿ ಭಾಗವಹಿಸಲು ತೊಡಗುತ್ತದೆ. ಮಕ್ಕಳ ಶೈಕ್ಷಣಿಕ ಅಗತ್ಯಗಳನ್ನು ಅರ್ಥಮಾಡಿಕೊಳ್ಳಲು ಈ ವಿಧಾನವು ಇನ್ನಷ್ಟು ಸಹಾಯಮಾಡಿದೆ. ಚೆನ್ನಾಗಿ ಯೋಚಿಸಿ ಆಯೋಜಿಸಿದ ಆಟಗಳು, ಚಟುವಟಿಕೆಗಳು ಹಾಗು ಅಭ್ಯಾಸಗಳ ಮೂಲಕ ಪಾಂಡ್ಯ ಅವರು ಆರಂಭಿಕ ಗಣಿತ ಮತ್ತು ಭಾಷೆಯ ವಿಷಯಗಳಲ್ಲಿ ಮಕ್ಕಳ ಕಲಿಕಾ ಹಂತಗಳನ್ನು ಗಮನಿಸುತ್ತಾ ಬಂದಿದ್ದಾರೆ. ಈ ಮಟ್ಟದಲ್ಲಿ ಪ್ರತಿ ಮಗುವನ್ನೂ ಅರ್ಥಮಾಡಿಕೊಳ್ಳುವುದು ಹಾಗು ಪ್ರತಿ ಮಗುವಿನ ವಿವರಗಳನ್ನು ವ್ಯವಸ್ಥಿತವಾಗಿ ಗ್ರಹಿಸುವುದು ಅವರ ತರಗತಿ ಪ್ರಕ್ರಿಯೆಗಳು ಮತ್ತು ಬೋಧನೆಗಳಿಗೆ ಪೂರಕವಾಗಿದ್ದು, ಅವುಗಳನ್ನು ಪೂರೈಸುತ್ತದೆ ಕೂಡ. ಜೊತೆಗೆ, ಅವರ ತರಗತಿಯ ಮಕ್ಕಳು ಇನ್ನೂ ಪರಿಣಾಮಕಾರಿಯಾಗಿ ಕಲಿಯುತ್ತಾರೆ ಎಂಬುದನ್ನು ಕೂಡ ಅದು ಖಾತ್ರಿಪಡಿಸುತ್ತದೆ.

ಶಿಕ್ಷಕರ ಅಭ್ಯಾಸ ಮತ್ತು ಸಾಮರ್ಥ್ಯ ನಿರ್ಮಾಣ

ನೈಜವಾಗಿ ನಡೆಯುವ ಮುಖಾಮುಖಿ ತರಗತಿಯ ಒಡನಾಟ ಹಾಗು ಬೋಧನೆ-ಕಲಿಕೆ ಅಭ್ಯಾಸಗಳಿಂದ ದೂರಸರಿದು ವರ್ಚುವಲ್ ವಿಧಾನದಲ್ಲಿ ತೊಡಗಿಸಿಕೊಳ್ಳುವುದು, ಮೊಹಲ್ಲಾ/ಸಮುದಾಯ ತರಗತಿಗಳನ್ನು ನಡೆಸುವುದು, ಮನೆಗೆ ಹೋಗಿ ಪಾಠಮಾಡುವುದು ಮತ್ತು ಹಲವು ಸಾಂದರ್ಭಿಕ ಹಾಗು ಅಗತ್ಯಗಳಿಗೆ ಅನುಗುಣವಾದ ವಿಧಾನಗಳಿಗೆ ಬದಲಾಗುವುದು ನಮ್ಮ ಶಿಕ್ಷಕರಿಗೂ ಒಂದು ಕಲಿಕೆಯ ಅನುಭವವಾಗಿದೆ. ತಮ್ಮದೇ ಕಾರ್ಯಕ್ರಮಗಳ ಅಥವಾ ಸರ್ಕಾರ ನಡೆಸುವ ಕಾರ್ಯಕ್ರಮಗಳ ಮೂಲಕ ಮಕ್ಕಳೊಂದಿಗೆ ತೊಡಗಿಸಿಕೊಳ್ಳುವ ಹಲವು ವಿಧಾನಗಳನ್ನು, ಕಾರ್ಯನೀತಿಗಳನ್ನು ನಮ್ಮ ಶಿಕ್ಷಕರು ಪ್ರಯತ್ನಿಸಿದ್ದಾರೆ. ವಾಡಿಕೆಯ ತರಗತಿ ಬೋಧನೆಗೆ ಮರಳಲು ಅವರಿಗೆ ಹೆಚ್ಚು ಆಯೋಜಿತ ವಿಧಾನಗಳು ಹಾಗು ಅವರ ಕಾರ್ಯರೀತಿಗಳಲ್ಲಿ ಬದಲಾವಣೆಗಳು ಅಗತ್ಯವಿದೆ. ಮೇಡಿಯಾ, ದಿಂಧೋರ್‌ನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕರಾದ ವಿಜಯ್ ಪ್ರಕಾಶ್ ಜೈನ್ ಅವರು ಇದಕ್ಕೆ ಒತ್ತು ನೀಡುತ್ತಾ, “ಶಿಕ್ಷಕರಾಗಿ, ವಿಭಿನ್ನ ಶೈಕ್ಷಣಿಕ ಹಾಗು ಬೋಧನಶೈಲಿಯ ವಿಧಾನಗಳಿಗೆ ಹೊಂದಿಕೊಂಡು ಹೋಗಲು ತಯಾರಾಗಿರುವುದು ಅವಶ್ಯಕವಾಗುತ್ತದೆ” ಎನ್ನುತ್ತಾರೆ. ಇವರು ಸಣ್ಣ ತರಗತಿಯ ಮಕ್ಕಳಿಗೆ ಭಾಷೆಯನ್ನು ಬೋಧಿಸುತ್ತಿದ್ದು, ಲಾಕ್ಡೌನ್ ಜಾರಿಯಲ್ಲಿದ್ದಾಗ ಅವರು ತಮ್ಮ ಶಾಲೆಯ ಐವತ್ತು ಮಕ್ಕಳೊಂದಿಗೆ ಸಕ್ರಿಯವಾಗಿ ತೊಡಗಿಸಿಕೊಂಡಿದ್ದರು. ಅವರ ಅನುಭವದ ಪ್ರಕಾರ, ಯಾರೂ ತಮ್ಮ ವಿಷಯಗಳಿಗೆ ಮಾತ್ರ ತಮ್ಮನ್ನು ಸೀಮಿತಗೊಳಿಸಿಕೊಳ್ಳಲು ಆಗುವುದಿಲ್ಲ. ನೈಜ ತರಗತಿಯ ಬೋಧನಾಪ್ರಕ್ರಿಯೆಯಲ್ಲಿ ಹೆಚ್ಚು ಸಂಘಟಿತವಾದ ಕ್ರಮವೊಂದರ

ಅಗತ್ಯವಿದೆ. ಭಾಷೆಯನ್ನು ಬೋಧಿಸುವ ಅವರು ಮಕ್ಕಳ ಸಂಖ್ಯಾತ್ಮಕ ಕೌಶಲ ಹಾಗು ಸಾಮರ್ಥ್ಯಗಳನ್ನೂ ಸಹ ಅರ್ಥಮಾಡಿಕೊಂಡು, ಅದಕ್ಕೆ ಅನುಗುಣವಾಗಿ ತಮ್ಮ ದಿನನಿತ್ಯದ ಬೋಧನೆಯನ್ನು ರೂಪಿಸಿಕೊಳ್ಳುತ್ತಾರೆ. ಜೊತೆಗೆ, ಮಕ್ಕಳನ್ನು ಮುಂದಿನ ತರಗತಿಗಳಿಗೆ ತೇರ್ಗಡೆಮಾಡಿರುವುದರಿಂದ ಶಾಲೆಗಳು ಪುನಃ ತೆರೆಯುತ್ತಿದ್ದಂತೆ ಹೆಚ್ಚಿನ ಸವಾಲುಗಳು ಎದುರಾಗಲಿವೆ. ಇದಕ್ಕೆ ಅವರು ಸೋನಿಯಾಳ ಉದಾಹರಣೆಯನ್ನು ನೀಡುತ್ತಾರೆ.

ಐದನೇ ತರಗತಿಯ ವಿದ್ಯಾರ್ಥಿನಿಯಾದ ಆಕೆ, "ಸಾಂಕ್ರಾಮಿಕವು ಹರಡಲು ಶುರುವಾದಾಗ ಮೂರನೆಯ ತರಗತಿಯಲ್ಲಿ ಇದ್ದಳು. ಅವಳನ್ನೀಗ ಐದನೇ ತರಗತಿಗೆ ತೇರ್ಗಡೆ ಮಾಡಲಾಗಿದೆ. ನಾನು ಬೋಧಿಸುವ ಎರಡೂ ವಿಷಯಗಳಲ್ಲಿ ನನಗೆ ಅವಳ ಕಲಿಕೆಯ ಹಂತ ತಿಳಿದಿದೆ. ಅಗತ್ಯವಿರುವ ಕೌಶಲಗಳಿಗಾಗಿ ನಾನು ಕಾರ್ಯತತ್ಪರನಾಗಿ, ಅವಳು ಐದನೇ ತರಗತಿಗೆ ಸೂಕ್ತವಾದ ಕಲಿಕಾ-ಫಲಿತಾಂಶಗಳನ್ನು ಸಾಧಿಸುವಂತೆ ಅವಳಿಗೆ ನೆರವಾಗಬೇಕಿದೆ."

ತರಗತಿಯ ಪ್ರತಿ ಮಗುವಿನ ಕಲಿಕೆಯ ಹಂತಗಳ ಸೂಕ್ಷ್ಮವಾದ ಅರಿವು ಹೊಂದಿರುವುದನ್ನು, ಇನ್ನೂ ಹೆಚ್ಚಿನ ಸಂಘಟಿತ ವಿಧಾನದ ಬೋಧನೆಯ ಪ್ರಕ್ರಿಯೆಗಳನ್ನು ರೂಪಿಸುವುದಷ್ಟೇ ಅಲ್ಲದೇ, ಆಯೋಜಿಸುವುದನ್ನೂ ಯಾವುದೇ ಪರಿಣಾಮಕಾರಿ ಕೆಲಸವು (ಇಲ್ಲಿ, ಉದಾಹರಣೆಗೆ, ಸೋನಿಯಾಳ ಕಲಿಕೆಯಲ್ಲಿ ಆದ ನಷ್ಟವನ್ನು ತುಂಬಿಕೊಡುವುದು) ಬೇಡುತ್ತದೆ. ತರಗತಿಗಳಲ್ಲಿ ವಿಭಿನ್ನ ಕಲಿಕೆಯ ಹಂತಗಳಲ್ಲಿರುವ ಮಕ್ಕಳ ವಿಭಿನ್ನ ತಂಡಗಳಿರುತ್ತವೆ. ಹೀಗಾಗಿ, ಶಿಕ್ಷಕರಾಗಿ, ನಾವು ಏಕಕಾಲಕ್ಕೆ ನಾನಾ ತರಗತಿಗಳಿಗೆ ಹಾಗು ಕಲಿಕೆಯ ನಾನಾ ಸ್ತರಗಳಲ್ಲಿರುವವರಿಗೆ ಬೋಧಿಸುವ ಕ್ರಮಕ್ಕೆ (multi-grade multi-level -MGML) ಹೊಂದಿಕೊಳ್ಳಬೇಕಾಗುತ್ತದೆ. ನಮ್ಮಲ್ಲಿ ಹಲವರಿಗೆ ಬಹು ದರ್ಜೆ ಬಹು ಹಂತದ ಬೋಧನಾ ವಿಧಾನದಲ್ಲಿ ತಕ್ಕಮಟ್ಟಿನ ಪರಿಶ್ರಮದ ಕೊರತೆ ಇರುವುದರಿಂದ ಶಿಕ್ಷಕರ ಸಾಮರ್ಥ್ಯ ನಿರ್ಮಾಣವು ಈ ಕಾರ್ಯರಂಗದ ಅಗತ್ಯವಾಗಿದೆ. ಅಂತಹ ತರಬೇತಿ ಹಾಗು ಕಾರ್ಯಾಗಾರಗಳು ನಮ್ಮನ್ನು ನಮ್ಮ ಹಿಂದಿನ ಅಭ್ಯಾಸ ಮತ್ತು ಅನುಭವಗಳಿಂದ ದೂರಸರಿದು, ಮುಂಬರುವ ವರ್ಷಗಳಲ್ಲಿ ನಮ್ಮ ವಿದ್ಯಾರ್ಥಿಗಳ ನಾನಾ ಬಗೆಯ ಅಗತ್ಯಗಳಿಗೆ ಯೋಗ್ಯವಾಗಿರುವಂತಹ ನೂತನ ಸಾಮರ್ಥ್ಯಗಳನ್ನು ನಿರ್ಮಿಸುತ್ತವೆ.

## ಯಥಾಸ್ಥಿತಿಗೆ ಮರಳುವಿಕೆ

ಶಾಲೆಗಳು ಮಕ್ಕಳಿಗೆ ಮುಚ್ಚಿದ್ದರೂ, ನಮ್ಮ ಶಿಕ್ಷಕರು ದಿನವೂ ತಮ್ಮ-ತಮ್ಮ ಶಾಲೆಗಳಿಗೆ ಎಂದಿನಂತೆ ಹೋಗುತ್ತಲೇ ಇದ್ದಾರೆ. ಆದರೆ ಇಂದಿನ ಪರಿಸ್ಥಿತಿ ಲಾಕ್ ಡೌನ್ ಹೇರುವುದಕ್ಕೂ ಮೊದಲಿನ ಸ್ಥಿತಿಗಿಂತ ಸಂಪೂರ್ಣ ಭಿನ್ನವಾಗಿದೆ: ಆಗ ಉತ್ಸಾಹ, ಲವಲವಿಕೆ ಇತ್ತು; ತರಗತಿಯೊಳಗಿನ ದಿನನಿತ್ಯದ ಒಡನಾಟಗಳಿದ್ದವು ಮತ್ತು ಮಕ್ಕಳೊಂದಿಗೆ ತೊಡಗಿಸಿಕೊಳ್ಳುವುದಿತ್ತು. ಮತ್ತೊಮ್ಮೆ ಯಥಾಸ್ಥಿತಿಯ ಚಟುವಟಿಕೆಗೆ ಮರಳಿದಾಗ, ಶಾಲೆಯ ಒಳಗೆ ಮತ್ತು ಹೊರಗೆ, ಆರೋಗ್ಯ ಮತ್ತು ಶುಚಿತ್ವದ ಅರಿವು ಮೂಡುವಂತೆ, ಅದನ್ನು ಮಕ್ಕಳು ಅಭ್ಯಾಸಮಾಡುವಂತೆ ನೋಡಿಕೊಳ್ಳಬೇಕಾದ ಕೆಲವು ಹೊಸ ಅಂಶಗಳು ಇರುತ್ತವೆ. ಈ ಕೋವಿಡ್ ಪರಿಸ್ಥಿತಿಯ ಉದ್ದಕ್ಕೂ ಸಂಪೂರ್ಣ ಸಮುದಾಯವು ರಾಜ್ಯ ಸರ್ಕಾರಗಳು ತಮಗೆ ವಹಿಸಿಕೊಟ್ಟ ಕರ್ತವ್ಯಗಳನ್ನು ನಿಭಾಯಿಸಿದ ಹಾಗು ಹಲವು ರೀತಿಗಳಲ್ಲಿ ಸೇವೆ ಸಲ್ಲಿಸಿದ ಶಿಕ್ಷಕರು ಮತ್ತು ಶಾಲಾಡಳಿತದ ಜೊತೆಗೂಡಿ ಕೆಲಸಮಾಡುತ್ತಿದೆ. ಶಾಲೆಗಳು ಮತ್ತೆ ತೆರೆಯುತ್ತಿದ್ದಂತೆ ತರಗತಿಯ ಬೋಧನೆ, ನಿರ್ವಹಣೆ ಹಾಗು ಶಿಕ್ಷಕರ ಮತ್ತು ಆಡಳಿತ ವರ್ಗದ ಕಾರ್ಯಾಚರಣೆಗಳು ಬದಲಾಗುತ್ತವೆ.

ನಾವು ಬಾನ್ಸವಾರ, ತಲ್ವಾರಾ, ಅರ್ಥುನ, ಗಾಧಿ, ಛೋಟಿ ಶರ್ವಣ್ ಮತ್ತು ಬಾಗೀದೋರಾ ವಿಭಾಗಗಳ ಎಂಬತ್ತು ಮುಖ್ಯ ಶಿಕ್ಷಕರೊಂದಿಗೆ ನಡೆಸಿದ ಮೂರು ದಿನಗಳ ಎರಡು ಕಾರ್ಯಾಗಾರಗಳಲ್ಲಿ ಸದ್ಯದ ಸವಾಲುಗಳನ್ನು ಚರ್ಚೆಯ ಮೂಲಕ

ಅರ್ಥಮಾಡಿಕೊಳ್ಳಲು ಪ್ರಯತ್ನಿಸಿದೆವು. ಮಕ್ಕಳಲ್ಲಿ ಉತ್ತಮತರ ಕಲಿಕೆಯಾಗುವಂತೆ ಹಾಗು ಶಿಕ್ಷಕರು ಉತ್ತಮ ಬೋಧನವಿಧಾನಗಳನ್ನು ಅಳವಡಿಸಿಕೊಳ್ಳುವಂತೆ ನೋಡಿಕೊಳ್ಳಲು ಈಗಾಗಲೇ ಗುರುತಿಸಲ್ಪಟ್ಟಿರುವ ಅಗತ್ಯಗಳು ಹಾಗು ಗುರಿಗಳ ವಿಷಯವಾಗಿ ಮುಖ್ಯಶಿಕ್ಷಕರು ಹೇಗೆ ಕಾರ್ಯನಿರತರಾಗಬೇಕು ಎಂಬ ಯೋಜನೆಯನ್ನು ರೂಪಿಸಿಕೊಳ್ಳಲು ಯತ್ನಿಸಿದೆವು. ಇದರಲ್ಲಿ ಪಾಲ್ಗೊಂಡವರು ಸ್ಥಳೀಯ ಸಮುದಾಯಗಳಲ್ಲಿನ ಹಂತದಲ್ಲಿ ಸದ್ಯದ ಪರಿಸ್ಥಿತಿ ಹೇಗಿದೆ ಎಂಬುದನ್ನು ಅರ್ಥಮಾಡಿಕೊಳ್ಳುವುದು ತುರ್ತಿನ ಅಗತ್ಯವಾಗಿದೆ ಎಂಬ ಅಂಶವನ್ನು ಒತ್ತಿಹೇಳಿದ್ದಲ್ಲದೆ, ಸಮುದಾಯದ ಅಗತ್ಯ ಹಾಗು ಸವಾಲುಗಳಿಗೆ ಸ್ಪಂದಿಸುವಂತಹ ಕಾರ್ಯವನ್ನು ವ್ಯವಸ್ಥಿತವಾಗಿ ಮಾಡುವುದು ಎಷ್ಟು ಮುಖ್ಯ ಎಂಬುದನ್ನು ಮನದಟ್ಟುಮಾಡಿಸಿದರು. ಮಕ್ಕಳು ಗೈರುಹಾಜರಾಗದೆ ನಿಯಮಿತವಾಗಿ ಶಾಲೆಗೆ ಬರುವುದನ್ನು ಮತ್ತು ಶಾಲೆ ತೊರೆಯದೇ ಇರುವುದನ್ನು ಖಾತ್ರಿಪಡಿಸುವಲ್ಲಿ ನಾವು ಸಮುದಾಯವನ್ನು ಹೇಗೆ ಅರ್ಥಮಾಡಿಕೊಳ್ಳುತ್ತೇವೆ, ಅದಕ್ಕೆ ಹೇಗೆ ಸ್ಪಂದಿಸುತ್ತೇವೆ ಎಂಬುದು ನಿರ್ಣಾಯಕ ಪಾತ್ರ ವಹಿಸಲಿದೆ. ಶಾಲೆ ತೆರೆಯುತ್ತಿದ್ದಂತೆಯೇ ಶೈಕ್ಷಣಿಕ ಪ್ರಕ್ರಿಯೆಗಳನ್ನು ಮುಂದುವರಿಸಿಕೊಂಡು ಹೋಗುವ ಬದಲು ಪ್ರತಿ ಮಗುವನ್ನೂ ಶಾಲೆಗೆ ಸ್ವಾಗತಿಸಿ, ಅದಕ್ಕೊಂದು ಸ್ಥಾನ ಕಲ್ಪಿಸಿಕೊಡಬೇಕಿದೆ. ಮಕ್ಕಳು ಶಾಲಾ ದಿನಚರಿಯಿಂದ ಬಹುಕಾಲ ಹೊರಗಿದ್ದು, ಅವರಲ್ಲಿ ಅನೇಕರು ಭಾವನಾತ್ಮಕ ಹಾಗೂ ಹಣಕಾಸಿನ ಸಂಕಷ್ಟಗಳಿಗೆ ತುತ್ತಾಗಿದ್ದಿರಬಹುದಾದ ವಾಸ್ತವಿಕತೆಯನ್ನು ಪರಿಗಣಿಸಿ ಆತ್ಮೀಯ ವಾತಾವರಣವನ್ನು ಹುಟ್ಟುಹಾಕಲು ಶಾಲೆಗಳು ಕಾರ್ಯನಿರತವಾಗಬೇಕಿವೆ.

ಹೀಗಾಗಿ, ಕಲಿಕೆಯಲ್ಲಾಗಿರುವ ಬಿರುಕನ್ನು ಮುಚ್ಚಲು, ಮೊದಲಿಗೆ, ಕಲಿಕೆಯಲ್ಲಿನ ಬಿರುಕುಗಳನ್ನು ಗುರುತಿಸಲು ಮಕ್ಕಳ ಮೌಲ್ಯಮಾಪನವಾಗಬೇಕಿದೆ. ಇದಕ್ಕಾಗಿ, ನಾವು ವಿವಿಧ ವಿಷಯಗಳಲ್ಲಿ ಅವರ ಮೂಲಭೂತ ಕೌಶಲಗಳನ್ನು ಅರ್ಥಮಾಡಿಕೊಳ್ಳುವುದರ ಬಗ್ಗೆ ಗಾಢವಾಗಿ ಯೋಚಿಸುವ ಅಗತ್ಯವಿದೆ. ಪ್ರತಿ ಮಗುವಿನ ವೈಯಕ್ತಿಕ ಅಗತ್ಯಗಳನ್ನು ಹಾಗು ಕಲಿಕೆಯ ಹಂತವನ್ನು ಅರಿಯುವುದು ಮುಖ್ಯವಾಗುತ್ತದೆ. ಹೀಗೆ ಮಾಡಿದಾಗ ನಾವು ಅವರಿಗೆ ಅತ್ಯುತ್ತಮ ರೀತಿಯ ಬೆಂಬಲ ಹಾಗು ಮಾರ್ಗದರ್ಶನ (ಪರಿಹಾರಕ ಕಾರ್ಯ/ಸೇತುಬಂಧ ಪಾಠಗಳಂತಹ) ನೀಡಲು ಸಾಧ್ಯವಾಗುತ್ತದೆ. ಹೀಗಾಗಿ, ನಾವು ಎರಡು ಮುಖ್ಯ ಗುರಿಗಳನ್ನು ಗುರುತಿಸಿ, ಅವುಗಳನ್ನು ಸಾಧಿಸುವತ್ತ ಕಾರ್ಯನಿರತರಾಗಲು ಯೋಜನೆ ರೂಪಿಸುತ್ತೇವೆ. ಅವೆಂದರೆ, ಮಕ್ಕಳ ಕಲಿಕೆಯನ್ನು ಖಾತ್ರಿಪಡಿಸುವುದು ಮತ್ತು ಪರಿಣಾಮಕಾರಿ ಬೋಧನೆಯ ಅಭ್ಯಾಸಗಳನ್ನು ಸುಗಮಗೊಳಿಸುವುದು.

* ಮಕ್ಕಳ ಗುರುತು ಮರೆಮಾಚಲು ಅವರ ಹೆಸರುಗಳನ್ನು ಬದಲಿಸಲಾಗಿದೆ.

ನಿಕೇತ ಸಾಗರ್ ಅವರು ಫೆಲೋ ಆಗಿ ಅಜೀಂ ಪ್ರೇಮ್‌ಜಿ ಫೌಂಡೇಷನ್ ಸೇರಿ, ಈಗ ರಾಜಸ್ಥಾನದ ಬಾನ್ಸವಾಡಾದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ದಿಲ್ಲಿ ವಿಶ್ವವಿದ್ಯಾಲಯದ "ಸಮಾಜ ಕಾರ್ಯ ವಿಭಾಗ"ದಿಂದ ಸ್ನಾತಕೋತ್ತರ ಪದವಿ ಪಡೆದಿರುವ ಇವರು ಇದಕ್ಕೂ ಮೊದಲು ಎಐಎಫ್ ನ "ಕಲಿಕೆ ಮತ್ತು ವಲಸೆ" ಎಂಬ ಕಾರ್ಯಕ್ರಮದಲ್ಲಿ (LAMP) ಪಶ್ಚಿಮ ಒಡಿಶಾದ ಸಂಕಷ್ಟಪೀಡಿತ ಗುಳೆ ಕಾರ್ಮಿಕರೊಂದಿಗೆ ಕೆಲಸಮಾಡುವ "ಲೋಕದೃಷ್ಟಿ" ಎಂಬ ಸಂಸ್ಥೆಯಲ್ಲಿ ಎಐಎಫ್-ಕ್ಲಿಂಟನ್ ಫೆಲೋ ಆಗಿ ಸೇವೆ ಸಲ್ಲಿಸಿದ್ದರು. ಜಾತಿ ಹಾಗು ಲಿಂಗ ಸಂಬಂಧಿತ ಅಧ್ಯಯನಗಳು, ಬುಡಕಟ್ಟು

ಸಮುದಾಯಗಳಲ್ಲಿನ ಶಿಕ್ಷಣದ ಸಾಮಾಜಿಕ-ರಾಜಕೀಯ ಸನ್ನಿವೇಶ, ಹಿಂದುಳಿದ ಸಮುದಾಯಗಳಿಂದ ಬರುವ ಮೊದಲ ಪೀಳಿಗೆಯ ಕಲಿಕಾರ್ಥಿಗಳ ಶೈಕ್ಷಣಿಕ ಅಗತ್ಯಗಳು ಇವರು ಆಸಕ್ತಿ ತೋರುವ ವಿಷಯಗಳಾಗಿವೆ. ಇವರನ್ನು ಸಂಪರ್ಕಿಸಬಹುದಾದ ಮಿಂಚಂಚೆ ವಿಳಾಸ: niket.sagar@azimpremjifoundation.org